







ಸುಂದರಿ (ಅಥವಾ ವೈಲ್ಡ್ ರೆಬೆಕ್ಕಾ) ಯಾರನ್ನೂ ಬೆರಗುಗೊಳಿಸದಿರದು. ಅಮೃತಶಿಲೆಯಲ್ಲಿ ಕೆತ್ತಲ್ಪಟ್ಟ ಈ ಶಿಲ್ಪದ ಮುಖ ಹಾಗೂ ಮೈಮೇಲಿನ ಬಟ್ಟೆಯ ನೆರಿಗೆಗಳು ಅಷ್ಟು ಸೂಕ್ಷ್ಮ ಕೆತ್ತನೆಯಾಗಿದ್ದು ನೈಜತೆಯನ್ನು ಕಾಣಬಹುದು. ಮುಸುಕಿನೊಳಗಿನಿಂದ ಕಾಣಿಸುವ ಆ ಮುಗುಳ್ನಗೆಗೆ ಮನಸೋಲದವರಿಲ್ಲ. ಒಂದನೇ ಸಾಲಾರ್ ಜಂಗ್‌ರವರು ತಮ್ಮ ಇಟಲಿ ಪ್ರವಾಸದ ಸಂದರ್ಭದಲ್ಲಿ (1876) ತರಿಸಿದ ಈ ಶಿಲ್ಪವು ಸುಮಾರು ಐದೂವರೆ ಅಡಿ ಎತ್ತರವಿದೆ.

ದೇಶಪ್ರೇಮವನ್ನು ಪ್ರತಿಬಿಂಬಿಸುವ ಯೋಧರು, ಮುಗ್ಧ ಮಗು, ಸುಂದರಿಯರು, ಹೀಗೆ ಎಲ್ಲರೂ ಇಲ್ಲಿ ಅಮೃತಶಿಲೆಯಲ್ಲಿ ಕಂಗೊಳಿಸುತ್ತಿದ್ದಾರೆ. ಈಜಿಪ್ಟಿನ ದೊರೆ ಟುಟಂಕಮನ್‌ನ ಸಿಂಹಾಸನದ ಪ್ರತಿರೂಪವನ್ನು ಇಲ್ಲಿ ಕಾಣಬಹುದು.ಯೂರೋಪ್‌ನ ವಿವಿಧ ದೇಶಗಳ ಪೀಠೋಪಕರಣಗಳು, ಮಂಚಗಳು, ಜಾಲಂದ್ರದಿಂದ ಕೂಡಿದ ಕಿಟಕಿಗಳು, ರತ್ನಖಚಿತವಾದ ಕಂಬಳಿಗಳು ಇಲ್ಲಿವೆ. ದಂತದಿಂದ ರಚಿತವಾದ ವಸ್ತುಗಳು ಇಲ್ಲಿ ಅಪಾರ ಸಂಖ್ಯೆಯಲ್ಲಿವೆ. ಚಿಕ್ಕ ಚಿಕ್ಕ ಪೆಟ್ಟಿಗೆಗಳು, ಅಲಂಕಾರಿಕ ಪಾತ್ರೆಗಳು, ಕುರ್ಚಿಗಳು, ಮೇಜುಗಳು, ಕ್ಯಾಂಡಲ್ ಸ್ಟ್ಯಾಂಡ್‌ಗಳು, ಮಸೀದಿಗಳು, ಅರಮನೆಗಳು, ತಾಜ್ ಮಹಲ್, ಕುತುಬ್ ಮಿನಾರ್, ಹೀಗೆ ಎಲ್ಲಾ ರೀತಿಯ ಪ್ರತಿರೂಪಗಳು ಇಲ್ಲಿ ದಂತದಿಂದ ನಿರ್ಮಾಣಗೊಂಡಿವೆ.

ದಕ್ಷಿಣ ಭಾರತದ ವಿವಿಧ ರಾಜವಂಶಗಳಿಗೆ ಸಂಬಂಧಿಸಿದ ಕಂಚಿನ ವಿಗ್ರಹಗಳ ಅಪೂರ್ವ ಸಂಗ್ರಹವಿದೆ. ಪಂಚಲೋಹದಿಂದ ನಿರ್ಮಿಸಲ್ಪಟ್ಟ ಶಿವಪಾರ್ವತಿಸ್ಕಂದ ಶಿಲ್ಪವು ಬಹಳ ಆಕರ್ಷಕವಾಗಿದೆ. ಇಲ್ಲಿನ ಮೆಫಿಸ್ಟೋಫಿಲಿಸ್ ಮತ್ತು ಮಾರ್ಗರೀಟಾ ಶಿಲ್ಪವು ಸೂಕ್ಷ್ಮ ಕಲೆಗಾರಿಕೆಗೆ ಅತ್ಯುತ್ತಮ ಉದಾಹರಣೆಯಾಗಿದೆ. ಸೈಕಮೋರ್‌ಮರದಲ್ಲಿ ಕೆತ್ತಿರುವ ಆಳೆತ್ತರದ ಈ ಶಿಲ್ಪವು ಮುಂಭಾಗದಲ್ಲಿ ಅತ್ಯಂತ ಕ್ರೂರ ಕಥಾಪಾತ್ರವಾದ ಮೆಫಿಸ್ಟೋಫಿಲಿಸ್‌ನನ್ನು ಬಿಂಬಿಸುವುದಾದರೆ, ಅದೇ ಶಿಲ್ಪದ ಹಿಂಭಾಗವು ನಾಚಿಕೆ ಹಾಗೂ ಮುಗ್ಧತೆಯ ಪ್ರತಿರೂಪವೆಂಬಂತಿರುವ ಮಾರ್ಗರೀಟಾಳನ್ನು ಬಿಂಬಿಸುತ್ತದೆ. ಶಿಲ್ಪದ ಹಿಂಭಾಗವು ದೊಡ್ಡ ಗಾತ್ರದ ಕನ್ನಡಿಯಲ್ಲಿ ಕಂಡುಬರುತ್ತದೆ. ವಿಶೇಷವೆಂದರೆ ಈ ಶಿಲ್ಪದ ನಿರ್ಮಾತೃ ಯಾರೆಂಬುದು ಎಲ್ಲಿಯೂ ಉಲ್ಲೇಖವಾಗಿಲ್ಲ. 19ನೇ ಶತಮಾನದಲ್ಲಿ ರಚಿಸಲ್ಪಟ್ಟದ್ದೆಂದು ನಂಬಲಾಗುವ ಈ ಶಿಲ್ಪವು ಆರು ಅಡಿಗಳಷ್ಟು ಎತ್ತರವಿದೆ.

ದೇಶ ವಿದೇಶಗಳಿಂದ ತರಿಸಿದ ವಿವಿಧ ಆಯುಧಗಳ ಅಪೂರ್ವ ಸಂಗ್ರಹ ಇನ್ನೊಂದು ಆಕರ್ಷಣೆ. ಈಟಿ, ಭರ್ಚಿಗಳಿಂದ ಹಿಡಿದು ಆಧುನಿಕ ಪಿಸ್ತೂಲ್‌ಗಳವರೆಗೆ ಆಯುಧಗಳನ್ನು ಕಾಣಬಹುದು. ದೊಡ್ಡ ದೊಡ್ಡ ಕೋವಿಗಳು



ಮಾತ್ರವಲ್ಲದೆ, ನಮ್ಮ ತೋರುಬೆರಳಿನ ಗಾತ್ರದ ಪಿಸ್ತೂಲ್ ಕೂಡಾ ಇದೆ. ಮೊಘಲ್ ರಾಜರು ಬಳಸುತ್ತಿದ್ದ ಖಡ್ಗಗಳು, ಶಿರಸ್ತ್ರಾಣಗಳು, ಯುದ್ಧದ ಸಮಯದಲ್ಲಿ ಧರಿಸುವ ಕವಚಗಳು, ಕೈಕವಚಗಳಿವೆ. ಆನೆಗಳ ಮುಖಗಳಿಗೆ ಬಳಸುತ್ತಿದ್ದ ರಕ್ಷಣಾ ಕವಚಗಳನ್ನಿಲ್ಲಿ ಕಾಣಬಹುದು. ಹಿಂದೂ ದೇವಾಲಯಗಳಲ್ಲಿ ಬಳಸುತ್ತಿದ್ದ ವಿವಿಧ ತರಹದ ದೀಪಗಳು, ಆರತಿಗಳು, ಅನೇಕ ತೀರ್ಥಂಕರರ ಆಳೆತ್ತರದ ಶಿಲ್ಪಗಳು, ಬುದ್ಧನ ಶಿಲ್ಪಗಳು ಇಲ್ಲಿವೆ.

ಚೀನಾ ದೇಶದಿಂದ ತರಿಸಿದ ವಸ್ತುಗಳು ತುಂಬ ಆಕರ್ಷಕವಾಗಿವೆ. ಪಿಂಗಾಣಿಯಿಂದ ತಯಾರಾದ ಪಾತ್ರೆಗಳು, ಶಿಲ್ಪಗಳಿವೆ. ನೂರಾರು ತರಹದ ಬೀಗಗಳು ಈ ಸಂಗ್ರಹಾಲಯದಲ್ಲಿವೆ. ಒಂದು ಕೋಣೆಯ ತುಂಬಾ ವಿವಿಧ ರೀತಿಯ ವಾಕಿಂಗ್ ಸ್ಟಿಕ್‌ಗಳನ್ನು ಜೋಡಿಸಿಡಲಾಗಿದೆ. ಇನ್ನು ಇಲ್ಲಿರುವ ವಿವಿಧ ರೀತಿಯ ಗಡಿಯಾರಗಳು ಬೆರಗುಗೊಳಿಸುತ್ತವೆ. ವಿಶಾಲ ಹಜಾರದಲ್ಲಿರುವ ಗಡಿಯಾರವೊಂದು ಬಹಳ ಆಕರ್ಷಕವಾಗಿದೆ. ಇಂಗ್ಲಂಡ್‌ನಿಂದ ತರಿಸಲಾದ ಕಂಚು ಮತ್ತು ಮರದಿಂದ ತಯಾರಾದ ಈ ಗಡಿಯಾರದಲ್ಲಿ ಕೆಲವು ಚಿಕ್ಕ ಗೊಂಬೆಗಳಿವೆ. ಪ್ರತೀ ಸೆಕಂಡಿಗೆ ಒಂದು ಗೊಂಬೆಯು ಸುತ್ತಿಗೆಯಿಂದ ಬಡಿಯುತ್ತಿರುತ್ತದೆ. ಪ್ರತೀ ಗಂಟೆಗೆ, ಒಂದು ಗೊಂಬೆ ಹೊರಬಂದು, ಅಲ್ಲಿರುವ ಒಂದು ಗಂಟೆಯನ್ನು ಬಾರಿಸಿ ಒಳಹೋಗುತ್ತದೆ. 19ನೇ ಶತಮಾನದ ಈ ಗಂಟೆ ಸುಮಾರು ನಾಲ್ಕೂವರೆ ಅಡಿ ಎತ್ತರವಿದೆ. ರತ್ನಗಂಬಳಿ, ರಾಜರುಗಳ ಪೋಷಾಕು, ಅವರು ಬಳಸುತ್ತಿದ್ದ ಆಭರಣಗಳು, ಹಾಗೂ ಅವರ ಚಪ್ಪಲಿಗಳ ಸಂಗ್ರಹಕ್ಕೆಂದೇ ಕೆಲವು ಕೋಣೆಗಳನ್ನು ಮೀಸಲಿಡಲಾಗಿದೆ. ರಾಜರ ನಿಲುವಂಗಿಗಳು ನವರತ್ನಖಚಿತವಾದವು. ರೇಷ್ಮೆ ಬಟ್ಟೆಯಲ್ಲಿ ಚಿನ್ನದ ನೂಲಿನಿಂದ ರಚಿಸಲ್ಪಟ್ಟ ಪ್ರಕೃತಿಯ ಸುಂದರ ಚಿತ್ರಗಳು ಇಲ್ಲಿವೆ. ಯೂರೋಪಿನಿಂದ ತರಿಸಲಾದ ಕಂಚಿನ ಶಿಲ್ಪಗಳಲ್ಲಿ ನೆಪೋಲಿಯನ್, ಅಲೆಗ್ಸಾಂಡರ್, ಶೇಕ್ಸ್‌ಪಿಯರ್, ಮುಂತಾದ ಮಹಾನ್ ವ್ಯಕ್ತಿಗಳ ಶಿಲ್ಪಗಳು ಅತ್ಯಪೂರ್ವ ಕೆತ್ತನೆಗಳಾಗಿವೆ.

ಈ ಸಂಗ್ರಹಾಲಯದೊಳಗೆ ಅರ್ಧಗಂಟೆಯಲ್ಲಿ ಇಲ್ಲಿನ ವಸ್ತುಗಳನ್ನು ನೋಡಿ ಮುಗಿಸುವುದು ಅಸಾಧ್ಯದ ಮಾತು. ಒಂದು ಇಡೀ ದಿನವಾದರೂ ಬೇಕು. ಫೋಟೋ ತೆಗೆಯಲು ಇಲ್ಲಿ ಅವಕಾಶವಿದೆ. ಮ್ಯೂಸಿಯಂನ ಯಾವ ಅಂತಸ್ತಿನಲ್ಲಿ ಏನೇನು ಇವೆ ಎಂಬ ಮಾಹಿತಿ ನಾವು ಖರೀದಿಸುವ ಟಿಕೆಟ್‌ನಲ್ಲಿಯೇ ಇರುತ್ತದೆ.